ಎಮ್ ವಿ ಸಿ ನಂಃ 828/2024
ಪಿ. ಡಬ್ಲ್ಯೂ- 1

**(ಇಂದು ದಿನಾಂಕ 09.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ 01 ನೇ ಎದುರುದಾರ ಪರ ವಕೀಲರಿಂದಃ**

ನಾನು ಬದಾಮಿಯಲ್ಲಿ ವಾಸ ವಾಗಿರುತ್ತೇನೆಂದರೆ ಸರಿ. ಅಪಘಾತವು ಬದಾಮಿ ಹತ್ತಿರ ಆಗಿರುತ್ತದೆ ಎಂದರೆ ಸರಿ. ಆಪಾದಿತ ವಾಹನ ವಿಮೆ ನೀಡಿದ ಸಂಸ್ಥೆ ವಿಜಯಪುರದಲ್ಲಿ ಇರುತ್ತದೆ ಎಂದರೆ ಸರಿ. ಅಪಘಾತವು ನನ್ನ ನಿರ್ಲಕ್ಷ್ಯತನದಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಅರ್ಜಿ ತೀರ್ಮಾನಿಸಲು ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಧಾರವಾಡ ದಿಂದ ವಾಸವಾಗಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ 02 ನೇ ಎದುರುದಾರ ಪರ ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರದಲ್ಲಿ ಗಾಂಧಿನಗರದಲ್ಲಿ ವಾಸವಾಗಿರುತ್ತೇನೆಂದು ಬರೆದಿರುತ್ತೇನೆ. ನಾನು ಗಾಂಧಿನಗರದಲ್ಲಿ ವಾಸವಾಗಿರುತ್ತನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಆಧಾರ ಕಾರ್ಡ ಬದಾಮಿ ತಾಲ್ಲೂಕು ಚೊಳಚ ಗುಡ್ಡ ವಿಳಾಸದಲ್ಲಿ ಇರುತ್ತವೆ ಎಂದರೆ ಸರಿ. ಅಪಘಾತವು ಬಾದಾಮಿ ತಾಲ್ಲೂಕುನಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಅರ್ಜಿ ಈ ನ್ಯಾಯಾಲಯದಲ್ಲಿ ಮಾನ್ಯ ವಾಗುವುದಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾವು ಚೊಳಚಗುಡ್ಡ ದಿಂದ ಬನಶಂಕರಿಗೆ ಹೋಗುತ್ತಿದ್ದೆವು. ಅಪಘಾತವು ರಾತ್ರಿ 08 ಗಂಟೆಗೆ ಆಗಿರುತ್ತದೆ. ಅಪಘಾತದ ರಸ್ತೆಯಲ್ಲಿ ಹೆಚ್ಚಿನ ವಾಹನ ಚಲಾಯಿಸುವುದಿಲ್ಲ ಎಂದರೆ ಸರಿ. ಅಪಘಾತದ ದಿನ ನಾವು ಆಸ್ಪತ್ರೆಗೆ ಹೋಗುತ್ತಿದ್ದೆವು. ಅಪಘಾತದ ದಿನನಾವು ಆಸ್ಪತ್ರೆಗ ಹೋಗುತ್ತಿದ್ದೆವೆ ಎಂದು ನಮ್ಮ ದೂರು ಮತ್ತು

ಅರ್ಜಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ವಾಹನಕ್ಕೆ ವಿಮೆ ಮತ್ತು ನನಗೆ ಚಾಲನಾ ಪರವಾನಿಗೆ ಇರುವುದಿಲ್ಲ ಎಂದರೆ ಸರಿ. ಪೋಲೀಸರು ನನ್ನ ವಿರುದ್ದ ಕೂಡಾ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆಂದರೆ ಸರಿ. ಅಪಘಾತವು ಸಂಪೂರ್ಣವಾಗಿ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ವಿಮೆ ಇಲ್ಲದ ಕಾರಣ ಆಪಾದಿತ ವಾಹನದ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ದಿನನೇ ನಾನು ದೂರು ನೀಡಿರುತ್ತೇನೆ. ಅಪಘಾತದ ದಿನ ನೀಡಿದ ದೂರಿನ ಪ್ರತಿ ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಅರ್ಜಿ ಸಲ್ಲಿಸಲು ಆದ ವಿಳಂಬವನ್ನು ನಾನು ನನ್ನ ದೂರು ಮತ್ತು ಅರ್ಜಿಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಅಪಘಾತವು ನನ್ನ ತಪ್ಪಿ ನಿಂದ ಆಗಿದ್ದರೂ ಕೂಡಾ ಪೋಲೀಸ್ ರೊಂದಿಗೆ ಶಾಮಿಲಾಗಿ ಆಪಾದಿತ ವಾಹನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನನ್ನು ಕಾರೋಡಿಮಠ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿ ರುತ್ತೇನೆ. ಅಲ್ಲದೇ ಶ್ರೀನಿವಾಸ ಆಸ್ಪತ್ರೆ ಬದಾಮಿ, ಮತ್ತು ಜಿಲ್ಲಾಆಸ್ಪತ್ರೆ ಧಾರವಾಡ ಗಳಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಬದಾಮಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. 02 ನೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಬದಾಮಿ ಆಸ್ಪತ್ರೆ ಯಿಂದ ನಾನೇ ಬಿಡುಗಡೆ ಮಾಡಿಸಿಕೊಂಡು ಹೋಗಿರುತ್ತೇನೆ. ಬದಾಮಿ ಆಸ್ಪತ್ರೆಯಲ್ಲಿ ಎಲ್ಲಾ ಸೌಕರ್ಯ್ಯಗಳು ಇರುತ್ತವೆ ಎಂದರೆ ಸರಿ. ವೈದ್ಯರು ನಿ.ಪಿ.23 ರಲ್ಲಿ ವೈದ್ಯರು ನನಗೆ ಆರೋಗ್ಯವಾಗಿ ರುತ್ತಾನೆ ಎಂದು ಬರೆದಿರುತ್ತಾನೆ ಎಂದರೆ ಸರಿ. ನನಗೆ ಅಪಘಾತದ ಪಾದಕ್ಕೆ

ಮಾತ್ರ ಕ್ರಶ್ ಇನಜುರಿ ಆಗಿತ್ತು ಅದಕ್ಕೆ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕೈಗೆ ಪೆಟ್ಟಾದ ಬಗ್ಗೆ ಚಿಕಿತ್ಸೆ ದಾಖಲೆಗಳಲ್ಲಿ ಅದರ ನಮೂದು ಇಲ್ಲ ಎಂದರೆ ಸರಿ. ರಾಡ್ ನ್ನು ತೆಗೆದಿರುತ್ತಾರೆಂದರೆ ಸರಿ. ನಾನು ಮುಂದುವರೆದ ಚಿಕಿತ್ಸೆ ಪಡೆದಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. 02 ನೇ ಬಾರಿಗೆ ಚಿಕಿತ್ಸೆಗೆ ಹೋದಾಗ ವೈದ್ಯರು ಕಾಲಿನ ಹೋರಗೆ ಹಾಕಿದ ಕಬ್ಬಿಣ ರಾಡ ತೆಗೆಯಲು ಹೇಳಿರುತ್ತಾರೆ. ವೈದ್ಯರು ನನ್ನನ್ನು ಪರೀಕ್ಷಿ ನಂತರ ಚಿಕಿತ್ಸೆ ನೀಡಿ ಬಿಡುಗಡೆ ಗೋಳಿಸಿರುತ್ತಾರೆಂದರೆ ಸರಿ. ವೈದ್ಯರು ಬಿಡುಗಡೆ ಪತ್ರ ನೀಡುವಾಗ ಬಿಡುಗಡೆ ಪತ್ರ ದಲ್ಲಿ ನಾನು ಆರೋಗ್ಯವಾಗಿ ಎಂದು ಬರೆದಿರುತ್ತಾರೆಂದರೆ ಸರಿಯಲ್ಲ. Discharge summary ಯಲ್ಲಿ ನನಗೆ ಆದ ಗಾಯಗಳು ಗುಣಮುಖ ವಾಗುತ್ತಿವೆ ಎಂದು ಬರೆದಿರುತ್ತಾರೆಂದರೆ ಸರಿ. ನಾನು ಮುಂದುವರೆದ ಚಿಕಿತ್ಸೆಗೆ ಹೋದಾಗ ಎಕ್ಸರೆ ಮಾಡಿರುತ್ತಾರೆ ಅದರ ಜೋತೆಗೆ ವರದಿ ನೀಡಿರುತ್ತಾರೆ. ನಾನು ಅಂತಹ ಎಕ್ಸರೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಡಾಃ ಶ್ರೀನಿವಾಸ ಜಿಲ್ಲಾ ಆಸ್ಪತ್ರೆ ಧಾರವಾಡ ರವರು ನೀಡಿದ ಯಾವುದೇ ವೈದ್ಯಕೀಯ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಿನಾಂಕ ಹೇಳಲುಆಗುವುದಿಲ್ಲ. ನಾನು ಯಾವುದೇ ಚಿಕಿತ್ಸೆ ಪಡೆದಿದ್ದರೂ ಕೂಡಾ ಸುಳ್ಳು ಸಾಕ್ಷೀ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಿಟಿ ಸ್ಕಾನ್ಯ ರೆಡಾಲೋಜಿ ವರದಿಯಲ್ಲಿ ಅರ್ಜಿದಾರನ ಬಲಗಾಲಿನ ಟಿಬಿಯಾ ಮತ್ತು ಫ್ಯುಬಲಾ ಪೆಟ್ಟಾಗಿರುತ್ತದೆ ಎಂದು ಬರೆದಿದೆ ಎಂದರೆ ಸರಿ. ವೈದ್ಯರು ಹೇಳಿದಂತೆ ನಾನುಎ follow up treatment ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ಚಿಕಿತ್ಸೆಗಾಗಿ ರೂ.03 ಲಕ್ಷ ಹಣ ಖರ್ಚು ಮಾಡಿರುತ್ತನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಕಾಲಿಗ ಹಾಕಿದ್ದ ರೋಡನ್ನು ತೆಗೆಯಲು ರೂ, .02 ಲಕ್ಷ ಖರ್ಚು ಆಗಿದೆ ಎಂದುಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ಬೆರೆಯವರಿಂದ ಸಾಲ ಪಡೆದಿರುತ್ತೇನೆ ಎಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಹೋಗುತ್ತಿದ್ದನು. ನಾನು ಪ್ರತಿ ತಿಂಗಳು ರೂ.17,000/- ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಷ್ಟು ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿ ನಿಂದ ಆದ ಕಾರಣ 02 ನೇ ಎದುರುದಾರರು ಂಾವದೇ ಪರಿಹಾರ ಕೊಡಲುಬಾದ್ಯಸ್ತರಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಆಪಾದಿತ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. 01 ನೇ ಎದುರುದಾರ ವಿಮೆ ಷರತ್ತುಗಳನ್ನು ಉಲ್ಲಂಘಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆದ ಕಾರಣ ಪರಿಹಾರ ಪಡೆಯಲು ಅರ್ಹ ನಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ 60 ವರ್ಷ ಆಗಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.